# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 413
2. ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 18.07.2024.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರ 2023ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ ಐದು ಗ್ಯಾರಂಟಿಗಳು ಯಾವುವು; ಮತ್ತು ಈ ಗ್ಯಾರಂಟಿಗಳನ್ನು ಯಾವ ಇಲಾಖೆಗಳ ಮುಖೇನ ಅನುಷ್ಠಾನಗೊಳಿಸಲಾಗುತ್ತಿದೆ; (ಪೂರ್ಣ ವಿವರ ನೀಡುವುದು) | ರಾಜ್ಯ ಸರ್ಕಾರವು 2023-24ನೇ ಸಾಲಿನಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿತು. ಸರ್ಕಾರವು ಜಾರಿಗೆ ತಂದ ಗ್ಯಾರಂಟಿ ಯೋಜನೆಗಳು ಹಾಗು ಅವುಗಳನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳು ಕೆಳಕಂಡಂತಿದೆ. |

(ಕೋಟಿ ರೂ.ಗಳು)

| ಕ್ರ.ಸಂ | ಗ್ಯಾರಂಟಿ ಯೋಜನೆ | ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳು |
|---|---|---|
| 1 | ಗೃಹ ಲಕ್ಷ್ಮಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ |
| 2 | ಗೃಹ ಜ್ಯೋತಿ | ಇಂಧನ ಇಲಾಖೆ |
| 3 | ಅನ್ನ ಭಾಗ್ಯ | ಆಹಾರ ಮತ್ತು ನಾಗರೀಕ ಸರಬರಾಜು |
| 4 | ಯುವ ನಿಧಿ | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ |
| 5 | ಶಕ್ತಿ | ಸಾರಿಗೆ ಇಲಾಖೆ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ | ಈ ಐದು ಗ್ಯಾರಂಟಿಗಳ ಅನುಷ್ಠಾನಕ್ಕೆ 2023-24 ಮತ್ತು 2024-25ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನವೆಷ್ಟು; ಮತ್ತು ಈ ಸಾಲುಗಳಲ್ಲಿ ಈ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಇದುವರೆಗಿನ ಖರ್ಚು-ವೆಚ್ಚವೆಷ್ಟು; (ವರ್ಷವಾರು ಮತ್ತು ಯೋಜನೆವಾರು ಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಿಗೆ 2023-24 ಹಾಗು 2024-25ನೇ ಸಾಲಿನಲ್ಲಿ ಒದಗಿಸಿರುವ ಅನುದಾನ ಮತ್ತು ಖರ್ಚಾಗಿರುವ ವಿವರಗಳು ಕೆಳಕಂಡಂತಿದೆ |

2023-24ನೇ ಸಾಲಿನಲ್ಲಿ ಒದಗಿಸಿದ ಮತ್ತು ಖರ್ಚಾದ ಅನುದಾನ

| ಕ್ರ.ಸಂ | ಗ್ಯಾರಂಟಿ ಯೋಜನೆ | 2023-24 ರಲ್ಲಿ ಒದಗಿಸಿದ ಅನುದಾನ (ಕೋಟಿ ರೂ.ಗಳು) | ಖರ್ಚಾದ ಅನುದಾನ (ಕೋಟಿ ರೂ.ಗಳು) |
|---|---|---|---|
| 1 | ಗೃಹ ಲಕ್ಷ್ಮಿ | 17,500 | 16.964 |
| 2 | ಗೃಹ ಜ್ಯೋತಿ | 9,000 | 8,900 |
| 3 | ಅನ್ನ ಭಾಗ್ಯ | 7.307 | 5,706 |
| 4 | ಯುವ ನಿಧಿ | 250 | 89 |
| 5 | ಶಕ್ತಿ | 3,200 | 3,200 |
| | ಒಟ್ಟು | **37,257** | **34,859** |

2024-25ನೇ ಸಾಲಿನಲ್ಲಿ ಒದಗಿಸಿದ ಮತ್ತು ಖರ್ಚಾದ ಅನುದಾನ

| ಕ್ರ.ಸಂ | ಗ್ಯಾರಂಟಿ ಯೋಜನೆ | 2024-25 ರ ಆಯವ್ಯಯ ಅಂದಾಜು (ಕೋಟಿ ರೂ.ಗಳು) | ಜುಲೈ-14ರವರೆಗು ಖರ್ಚಾದ ಅನುದಾನ (ಕೋಟಿ ರೂ.ಗಳು) |
|---|---|---|---|
| 1 | ಗೃಹ ಲಕ್ಷ್ಮಿ | 28,608 | 6,133 |
| 2 | ಗೃಹ ಜ್ಯೋತಿ | 9,657 | 3.000 |
| 3 | ಅನ್ನ ಭಾಗ್ಯ | 8,079 | 1.327 |
| 4 | ಯುವ ನಿಧಿ | 650 | 38 |
| 5 | ಶಕ್ತಿ | 5,015 | 1,254 |
| | ಒಟ್ಟು | **52,009** | **11,752** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಇ | ಸರ್ಕಾರವು 2023-24 ಮತ್ತು 2024-25ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಗಳಿಗೆ ಮೀಸಲು ಇರಿಸಿದ ಅನುದಾನವೆಷ್ಟು; ಮತ್ತು ಈ ವರ್ಷಗಳಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು ಹಾಗು ವೆಚ್ಚವಾದ ಮೊತ್ತವೆಷ್ಟು; (ಇಲಾಖಾವಾರು ಮತ್ತು ವರ್ಷವಾರು ಪೂರ್ಣ ಮಾಹಿತಿ ನೀಡುವುದು) | ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಗಳಿಗೆ ಮೀಸಲು ಇರಿಸಿದ ಅನುದಾನವನ್ನು ಆರ್ಥಿಕ ಇಲಾಖೆಯು ಆಡಳಿತ ಇಲಾಖೆಗೆ ಸಂಪೂರ್ಣವಾಗಿ ಬಿಡುಗಡೆ ಮಾಡಿರುತ್ತದೆ. ಸರ್ಕಾರವು 2023-24 ಮತ್ತು 2024-25ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಗಳಿಗೆ ಮೀಸಲು ಇರಿಸಿದ ಅನುದಾನ ಮತ್ತು ವೆಚ್ಚದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಈ | ರಾಜ್ಯದಲ್ಲಿ 5 ಗ್ಯಾರಂಟಿಗಳ ಅನುಷ್ಠಾನದಿಂದ ರಾಜ್ಯ ಬೊಕ್ಕಸ ಖಾಲಿಯಾಗಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಆಡಳಿತ ಇಲಾಖೆಗಳು ಮತ್ತು ಈ ಇಲಾಖೆಗಳ ಅಡಿ ಇರುವ ನಿಗಮ ಪ್ರಾಧಿಕಾರ ಮತ್ತು ಮಂಡಳಿಗಳ ಆಸ್ತಿಗಳ ಸಮಗ್ರ ಪಟ್ಟಿಯನ್ನು ಸಿದ್ಧಪಡಿಸಲು ಮತ್ತು ಬಂಡವಾಳ ಹಿಂತೆಗೆಯಲು ಹಾಗೂ ಈ ಆಸ್ತಿಗಳನ್ನು ನಗದೀಕರಿಸಲು ಅಥವಾ ಮರುಬಳಕೆ ಮಾಡಲು ಕ್ರಮ ಕೈಗೊಂಡಿರುವುದು ನಿಜವೇ; | ರಾಜ್ಯದ ಆರ್ಥಿಕ ಪರಿಸ್ಥಿತಿಯು ಆರೋಗ್ಯಕರವಾಗಿದ್ದು, ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಒದಗಿಸಲಾಗಿದ್ದು ಅದರಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸರ್ಕಾರವು ಈ ಐದು ಗ್ಯಾರಂಟಿಗಳ ಜೊತೆಗೆ ಇತರೆ ಅಭಿವೃದ್ಧಿ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಬಂಡವಾಳ ಕಾಮಗಾರಿಗಳುನ್ನು ಸಹ ಅನುಷ್ಠಾನಗೊಳಿಸುತ್ತಿದ್ದು, ಈ ಎಲ್ಲಾ ಯೋಜನೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ರಾಜ್ಯದ ಬೊಕ್ಕಸದಿಂದ ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಒದಗಿಸಲಾಗಿರುತ್ತದೆ.<br>ಸಂಪನ್ಮೂಲ ಕ್ರೋಢೀಕರಣ ಹಾಗು ರಾಜ್ಯಕ್ಕೆ ಹೆಚ್ಚು ಆದಾಯ ಬರುವ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಆದರೆ, ಆಸ್ತಿಗಳ ನಗದೀಕರಣದ ಯಾವದೇ ಸಾಮಾನ್ಯ ಪ್ರಸ್ತಾವನೆಗಳು ಇರುವುದಿಲ್ಲ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಉ | ಹಾಗಿದ್ದಲ್ಲಿ, ಆಸ್ತಿ ನಗದೀಕರಣ ಎಷ್ಟು; ಬಂಡವಾಳ ಹಿಂತೆಗೆಯುವಿಕೆ ಯೋಜನೆಯನ್ನು ರೂಪಿಸಲು ರಾಜ್ಯ ಸರ್ಕಾರ ಗೊತ್ತು ಪಡಿಸಿರುವ ಇಲಾಖೆ ಅಥವಾ ಸಂಸ್ಥೆಗಳು ಯಾವುವು; ಇವುಗಳನ್ನು ಯಾವ ಆಧಾರ ಮತ್ತು ಮಾನದಂಡ ಆಧರಿಸಿ ನೇಮಕ ಮಾಡಲಾಗಿದೆ; ಹಾಗು ಇವುಗಳು ಇದುವರೆಗೂ ಕೈಗೊಂಡಿರುವ ಅಧ್ಯಯನ ಅಥವಾ ಮೌಲ್ಯಮಾಪನಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು) | ಪ್ರಶ್ನೆ ಉದ್ಭವಿಸುವುದಿಲ್ಲ |

FD/84/2024-DS-BR-FINANCE DEPT.SEC

(ಸಿದ್ದರಾಮಯ್ಯ)
ಮುಖ್ಯಮಂತ್ರಿ